ಕೇಂದ್ರದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಈ ವಿತರಣಾ ಕೇಂದ್ರದ ಕಾಮಗಾರಿ ಪೂರ್ಣಗೊಳಿಸುವ ಹಾಗೂ 220 ಕೆ.ವಿ.ಲೈನ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಹೌದು, ಇದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1088(1427)
ಸದಸ್ಯರ ಹೆಸರು : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಉತ್ತರ ಕರ್ನಾಟಕ 25 ಪಟ್ಟಣಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಗಳು ಯಾವ ಹಂತದಲ್ಲಿವೆ:

ಉತ್ತರ ಕರ್ನಾಟಕದ 25 ಪಟ್ಟಣಗಳ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕ ನಗರ ವಿಭಾಗೀಯ ಹೂಡಿಕಾ ಕಾರ್ಯಕ್ರಮ (NKUSIP) ಯೋಜನೆಯನ್ನು ಏಷ್ಯನಾ ಅಭಿವೃದ್ಧಿ ಬ್ಯಾಂಕ್‌ನ ಸಾಲದ ನೆರವಿನೊಡನೆ ಕೈಗೆತ್ತಿಕೊಳ್ಳಲಾಗಿದೆ.

ಯೋಜನೆಯ ಪ್ರಸ್ತುತ ಹಂತ ಈ ಕೆಳಕಂಡಂತಿದೆ:-

ಸಮಾಲೋಚಕರ ನೇಮಕಾತಿಗಾಗಿ ದಿನಾಂಕ:12-3-2007 ರಂದು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿರುತ್ತದೆ ಪ್ರಸ್ತುತ ಪ್ರಸ್ತಾವನೆಗಳ ತಾಂತ್ರಿಕ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ.

ಆ) ಈ 25 ಪಟ್ಟಣಗಳಿಗೆ ಏ.ಡಿ.ಬಿ. ಯಿಂದ ತೆಗೆದುಕೊಂಡಿರುವ ಸಾಲದ ಮೊತ್ತವೆಷ್ಟು;

ಈ ಕಾರ್ಯಕ್ರಮದ ಒಟ್ಟು ಅಂದಾಜು ಮೊತ್ತ ಯು.ಎಸ್.ಡಾಲರ್ 440 ಮಿಲಿಯನ್ ಗಳಾಗಿದ್ದು, ಯು.ಎಸ್.ಡಾಲರ್ 264 ಮಿಲಿಯನ್ (ರೂ. 1188 ಕೋಟಿ) ಗಳನ್ನು ಏ.ಡಿ.ಬಿ ಇಂದ ಸಾಲ ಪಡೆಯಲು ನಿರ್ಧರಿಸಲಾಗಿರುತ್ತದೆ.

ಇ) ಮಂಜೂರಾಗಿರುವ ಈ ಯೋಜನೆಯ ಮೊದಲನೇ ಹಂತದಲ್ಲೇ ಸಿಂಧನೂರು ಪಟ್ಟಣವನ್ನು ತೆಗೆದುಕೊಳ್ಳುವ ಉದ್ದೇಶವಿದೆಯೇ;

ಕಾಮಗಾರಿಗಳ ಅನುಷ್ಠಾನಪಡಿಸುವ ಸ್ಥಿತಿಯನ್ನಧರಿಸಿ, ಏ.ಡಿ.ಬಿ ಯಿಂದ ಸಾಲವನ್ನು ಕಂತುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಇದರಿಂದ Transaction

ವೆಚ್ಚವನ್ನು ಕಡಿಮೆಗೊಳಿಸಬಹುದಾಗಿದೆ. ಹಾಗಾಗಿ ರಾಯಚೂರು, ಹಾವೇರಿ ಮತ್ತು ಹೊಸಪೇಟೆ ಪಟ್ಟಣಗಳಲ್ಲಿ ಸ್ವಾದೀನ ಪಡಿಸಿಕೊಳ್ಳಲು ಆಯ್ಕೆ ಮಾಡಿರುವ ಭೂಮಿಗೆ ಪುನರ್ ವಸತಿ ನಕ್ಷೆಯನ್ನು ತಯಾರಿಸಲಾಗಿರುವುದರಿಂದ, ಈ ಪಟ್ಟಣಗಳನ್ನು ಮೊದಲನೇ ಕಂತಿನಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಉಳಿದ ಪಟ್ಟಣಗಳಿಗೆ, ಸಿಂಧನೂರನ್ನು ಸೇರಿಸಿ, ಕಾಮಗಾರಿಗಳ ಅನುಷ್ಠಾನಪಡಿಸುವ ಸ್ಥಿತಿಯನ್ನಧರಿಸಿ, ಮುಂದಿನ ಕಂತುಗಳಲ್ಲಿ ತೆಗೆದುಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1090(1520)
ಸದಸ್ಯರ ಹೆಸರು : ಶ್ರೀ ಬಾಲರಾಜ್.ಎಸ್(ಕೊಳ್ಳೆಗಾಲ)
ಉತ್ತರಿಸುವ ಸಚಿವರು : ಶ್ರೀ ಬಿ.ಶ್ರೀರಾಮುಲು(ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಕೊಳ್ಳೇಗಾಲ ಕ್ಷೇತ್ರದ ತಾಲ್ಲೂಕು ಕೇಂದ್ರ ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಿಸುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಬಂದಿದ್ದರೆ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಹೌದು, ಶೌಚಾಲಯ ಹಾಗೂ ಇತರ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲು ಸೂಕ್ತವಾದ ನಿವೇಶನ ಹಾಗೂ ಜಮೀನುಗಳನ್ನು ಒದಗಿಸುವಂತೆ ಚಾಮರಾಜನಗರ ಜಿಲ್ಲಾಡಳಿತವನ್ನು ಕೋರಲಾಗಿದೆ. ಸದರಿಯವರಿಂದ ಸೂಕ್ತ ನಿವೇಶನ ದೊರೆತ ಕೂಡಲೇ ಈ ದಿಶೆಯಲ್ಲಿ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1094(1359)
ಸದಸ್ಯರ ಹೆಸರು : ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ)
ಉತ್ತರಿಸುವ ಸಚಿವರು : ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೆ;

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯು ದಿನಾಂಕ 2.07.2005 ರಂದು ಪ್ರಾರಂಭವಾಗಿದೆ.